# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಸದಸ್ಯರ ಹೆಸರು | ಶ್ರೀ ಶಾಂತರಾಮ ಬುಡ್ನ ಸಿದ್ದಿ (ನಾಮನಿರ್ದೇಶನ ಹೊಂದಿದವರು) |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 573(654) |
| ಉತ್ತರಿಸಬೇಕಾದ ದಿನಾಂಕ | 20.02.2024 |
| ಉತ್ತರಿಸಬೇಕಾದವರು | ಮಾನ್ಯ ನಗರಾಭಿವೃದ್ಧಿ ಹಾಗೂ ನಗರ ಯೋಜನೆ ಸಚಿವರು |

<table>
<tr><th>ಕ್ರ. ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>(ಅ)</td><td>ನಗರ ಮತ್ತು ಮಹಾನಗರ ವ್ಯಾಪ್ತಿಯಲ್ಲಿ 600 ಚದರ ಅಡಿ ಜಾಗದಲ್ಲಿ ಹಾಗೂ 1200 ಚದರ ಅಡಿ ಜಾಗದಲ್ಲಿ ಮನೆ ನಿರ್ಮಾಣ ಮಾಡುವ ಸಮಯದಲ್ಲಿ ಸೆಟ್ ಬ್ಯಾಕ್ ಬಿಡುವಂತೆ ನಿಯಮ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಈ ಕುರಿತು ಸರ್ಕಾರದ ನಿಲುವೇನು;</td><td rowspan="3">ನಗರ ಸ್ಥಳೀಯ ಸಂಸ್ಥೆಗಳು ಕಟ್ಟಡ ನಿರ್ಮಾಣಕ್ಕೆ ಅನುಮತಿ ನೀಡುವ ಪೂರ್ವದಲ್ಲಿ ಯೋಜನಾ ಪ್ರಾಧಿಕಾರ/ನಗರಾಭಿವೃದ್ಧಿ ಪ್ರಾಧಿಕಾರಗಳಿಂದ ತಾಂತ್ರಿಕ ಅಭಿಪ್ರಾಯವನ್ನು ಪಡೆಯುತ್ತಿದ್ದು, ತಾಂತ್ರಿಕ ಅನುಮೋದನೆಯಂತೆ ಕಟ್ಟಡ ಪರವಾನಗಿ ನೀಡಲಾಗುತ್ತಿದೆ.<br><br>ಸ್ಥಳೀಯ ಯೋಜನಾ ಪ್ರದೇಶದ ಘೋಷಣೆ ಮಾಡಿರುವ ಆಯಾ ಪಟ್ಟಣಗಳಲ್ಲಿ ಸರ್ಕಾರದಿಂದ ಅನುಮೋದಿಸಲಾದ ವಲಯ ನಿಯಮಾವಳಿಗಳಂತೆ ವಿಸ್ತೀರ್ಣ / ಅಳತೆಗಳ ಅನುಗುಣವಾಗಿ ಕ್ರಮವಹಿಸಲಾಗುತ್ತಿದೆ.</td></tr>
<tr><td>(ಆ)</td><td>600 ಚದರ ಅಡಿ ಜಾಗದಲ್ಲಿ ಹಾಗೂ 1200 ಚದರ ಅಡಿಯಂತಹ ಸಣ್ಣ ಸ್ಥಳದಲ್ಲಿ ಮನೆ ನಿರ್ಮಿಸುವ ಸಮಯದಲ್ಲಿ ಸೆಟ್ ಬ್ಯಾಕ್ ಬಿಡುವುದರಿಂದ ವಿನಾಯಿತಿ ನೀಡುವ ಕುರಿತು ಸರ್ಕಾರ ಯಾವ ಕ್ರಮಕೈಗೊಂಡಿದೆ;</td></tr>
<tr><td>(ಇ)</td><td>ನಗರ ಪ್ರದೇಶಗಳಲ್ಲಿ ಸಣ್ಣ ಜಾಗದಲ್ಲಿ ಅನಿವಾರ್ಯವಾಗಿ ಮನೆ ನಿರ್ಮಿಸಬೇಕಾಗಿರುವುದರಿಂದ ಸೆಟ್ ಬ್ಯಾಕ್ ನಿಯಮದಿಂದ ಸಾರ್ವಜನಿಕರಿಗೆ ತೊಂದರೆಯಾಗಿದ್ದು, ಇದರಿಂದ 2024ರೊಳಗಾಗಿ ಸರ್ವರಿಗೂ ಸೂರು ಎಂಬ ಪ್ರಧಾನ ಮಂತ್ರಿಗಳ ಯೋಜನೆಗೂ ಧಕ್ಕೆಯಾಗುತ್ತಿರುವ ಕುರಿತು ಸರ್ಕಾರದ ನಿಲುವೇನು?</td></tr>
</table>

ಸಂಖ್ಯೆ :ನಅಇ 57 ಮೈಅಪ್ರಾ 2024(ಇ)

21/02/2024

**(ಬಿ.ಎಸ್ ಸುರೇಶ)**

ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು